**ದಿನಾಂಕಃ 06.01.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಪಾಟೀ ಸವಾಲುಃ 2 ನೇ ಎದುರುದಾರರ ಪರ / Insurance company ವಕೀಲರಾದ ಶ್ರೀ.VSN ರವರಿಂದಃ**

1) ಯಾವ ಅಪಘಾತದಲ್ಲಿ ನನ್ನ ಗಂಡನು ಮರಣ ಹೊಂದಿದ್ದಾರೋ ಸದರಿ ಅಪಘಾತವನ್ನು ನಾನು ನೋಡಿರುವುದಿಲ್ಲ. ಅಪಘಾತದ ಸಂಬಂಧವಾಗಿ ನನ್ನ ಭಾವ ಆದಂತಹ ಸಂತೋಷ್ ರವರು ಪೋಲಿಸರಿಗೆ ದೂರನ್ನು ನೀಡಿದ್ದಾರೆ.

2) ನೆಲಮಂಗಲದ ಬಳಿ ಹೆದ್ದಾರಿಯಲ್ಲಿ ಹೋಗುತ್ತಿದ್ದಾಗ ಯು-ಟರ್ನ್ ತೆಗೆದುಕೊಳ್ಳುವ ಸಮಯದಲ್ಲಿ ಅಪಘಾತವು ಆಗಿದೆ ಎಂಬುದಾಗಿ ದೂರಿನಲ್ಲಿ ನಮೂದು ಮಾಡಲಾಗಿದೆ ಎಂದರೆ ಸರಿ. ಒಂದು ದ್ವಿಚಕ್ರ ವಾಹನವು ಅಪಘಾತವನ್ನು ಮಾಡಿದೆ ಎಂದು ನನಗೆ ತಿಳಿದು ಬಂದಿದೆ, ಆದರೆ ಆ ದ್ವಿಚಕ್ರ ವಾಹನದ ಸಂಖ್ಯೆಯು ನನಗೆ ತಿಳಿದಿಲ್ಲ.

3) ನನ್ನ ಗಂಡನ ಉದ್ಯೋಗಕ್ಕೆ ಸಂಬಂಧಪಟ್ಟ ಹಾಗೆ ನೇಮಕಾತಿ ಆದೇಶವನ್ನು ಹಾಜರುಪಡಿಸಿರುವುದಿಲ್ಲ, ಆದರೆ ಒಂದು ಸಂಬಳದ ಚೀಟಿಯನ್ನು ಮಾತ್ರ ಹಾಜರುಪಡಿಸಿದ್ದೇನೆ. ನನ್ನ ಗಂಡನ ಮರಣದ ನಂತರ **Alcobev** ಕಂಪೆನಿಯವರು ಅಂದರೆ ನನ್ನ ಗಂಡನು ಕೆಲಸ ಮಾಡುತ್ತಿದ್ದಂತಹ ಕಂಪೆನಿಯ ಮಾಲೀಕರು ನನಗೆ **50** ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ.

4) ನನ್ನ ಗಂಡನು ಭವಿಷ್ಯ ನಿಧಿ ಮತ್ತು ಇ.ಎಸ್.ಐ ಸೌಲಭ್ಯ ಮಾಡಿಸಿದ್ದರು. **Alcobev** ಕಂಪೆನಿಯ ನಿಯಮಗಳ ಪ್ರಕಾರ ಇ.ಎಸ್.ಐ ಹಣ ಮತ್ತು ಭವಿಷ್ಯ ನಿಧಿ ಹಣ ಕೊಡುವುದಕ್ಕೆ ಒಂದು ನಿರ್ದಿಷ್ಟ ಅವಧಿ ಅಂದರೆ **180** ದಿನಗಳು ಇದ್ದವು ಮತ್ತು ನನ್ನ ಗಂಡನು ಆ ನಿರ್ದಿಷ್ಟ ಅವಧಿಯ ಮುಂಚಿತವಾಗಿಯೇ ಮರಣ ಹೊಂದಿದ್ದಾರೆ, ಆ ಕಾರಣದಿಂದ ಯಾವುದೇ ಸೌಲಭ್ಯ ದೊರೆತಿರುವುದಿಲ್ಲ. ಈ ಸಂಬಂಧವಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

5) ನಾನು ಬಿ.ಕಾಂ ವರೆಗೆ ಓದಿದ್ದೇನೆ. ನಾನು ಯಾವುದೇ ನೌಕರಿಯನ್ನು ಮಾಡುತ್ತಿಲ್ಲ. ನನ್ನ ಗಂಡನು ಯೂನಿಯನ್ ಬ್ಯಾಂಕ್ ನಲ್ಲಿ ಖಾತೆಯನ್ನು ಹೊಂದಿದ್ದರು ಮತ್ತು ಆ ಖಾತೆಗೆ ಆತನ ಸಂಬಳದ ಹಣ ಜಮಾ ಆಗುತ್ತಿತ್ತು. ನನ್ನ ಗಂಡನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಲು ನನಗೆ ತೊಂದರೆ ಇರುವುದಿಲ್ಲ. ನಾನು ನನ್ನ ಬ್ಯಾಂಕ್ ಖಾತೆಯ ಸ್ಟೇಟ್ ಮೆಂಟ್ ಹಾಜರುಪಡಿಸಿದ್ದೇನೆ.

6) ಸದರಿ ಕಂಪೆನಿಯವರು ನಮಗೆ **50** ಸಾವಿರ ರೂಪಾಯಿಗಳನ್ನು ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆಗಳು ನನ್ನ ಬಳಿ ಇರುವುದಿಲ್ಲ. ನಿ.ಪಿ.**3** ದಾಖಲೆಯನ್ನು **Alcobev** ಸಂಸ್ಥೆಯ ಮಾನವ ಸಂಪನ್ಮೂಲ ಅಧಿಕಾರಿಯು ನೀಡಿದ್ದಾರೆ ಆದರೆ ಆ ದಾಖಲೆಗೆ ಯಾರು ಸಹಿ ಮಾಡಿದ್ದಾರೆ

ಎಂದು ನನಗೆ ಗೊತ್ತಿಲ್ಲ. ನಿ.ಪಿ.**3** ಎಂದು ಗುರುತು ಆಗಿರುವ ದಾಖಲೆಯನ್ನು ನಾನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇನೆ ಎಂದರೆ ಸುಳ್ಳು.

7) **Alcobev** ಸಂಸ್ಥೆಯಲ್ಲಿ ನನ್ನ ಗಂಡನು ಕೆಲಸ ಮಾಡುತ್ತಿರಲಿಲ್ಲ ಮತ್ತು ನನ್ನ ಗಂಡನಿಗೆ ಯಾವುದೇ ಸಂಬಳ ಬರುತ್ತಿರಲಿಲ್ಲ ಎಂದರೆ ಸುಳ್ಳು.

8) ಶಾರದಮ್ಮ ರವರು ನನ್ನ ಗಂಡನ ತಾಯಿ ಆಗಿದ್ದಾರೆ. **2** ನೇ ಅರ್ಜಿದಾರರ ಗಂಡನ ಹೆಸರು ಸಿದ್ಧರಾಜು ಆಗಿದೆ. ಈ ಪ್ರಕರಣದ ಶೀರ್ಷಿಕೆಯಲ್ಲಿ **2** ನೇ ಅರ್ಜಿದಾರರ ಗಂಡನ ಹೆಸರನ್ನು ವೆಂಕಟಸ್ವಾಮಯ್ಯ ಎಂದು ತೋರಿಸಲಾಗಿದೆ ಎಂದರೆ ಸರಿ. ಅಪಘಾತದಲ್ಲಿ ಮರಣ ಹೊಂದಿದ ಮಧುಕಿರಣ್ ರವರಿಗೂ ಮತ್ತು **2** ನೇ ಅರ್ಜಿದಾರರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸುಳ್ಳು.

9) **2** ನೇ ಅರ್ಜಿದಾರರಿಗೆ ಸಂಬಂಧಿಸಿದಂತಹ ಆಧಾರ್ ಕಾರ್ಡ್ ನಲ್ಲಿ ಸಹಾ ಆಕೆಯ ಗಂಡನ ಹೆಸರನ್ನು ಬರೆದಿರುವುದಿಲ್ಲ ಎಂದರೆ ಸರಿ. ಮೇಲೆ ಹೇಳಿದ ಸಿದ್ಧರಾಜು ರವರು ಮರಣ ಹೊಂದಿದ್ದಾರೆ.

10) ನನ್ನ ಗಂಡನ ಅಂತ್ಯ ಸಂಸ್ಕಾರ ಮತ್ತು ಇತರೆ ಕಾರ್ಯಗಳಿಗೆ **2** ಲಕ್ಷ ರೂಪಾಯಿಗಳು ಖರ್ಚು ಆಗಿದೆ ಎಂದು ಹೇಳಿ ನಾನು ಸುಳ್ಳು ಪ್ರತಿಪಾದನೆಯನ್ನು ಮಾಡುತ್ತಿದ್ದೇನೆ ಎಂದರೆ ಸುಳ್ಳು.

11) ನನ್ನ ಗಂಡನ ಬಳಿ ಚಾಲನಾ ಪರವಾನಗಿ ಇತ್ತು ಮತ್ತು ಅದನ್ನು ಹಾಜರುಪಡಿಸಿದ್ದೇನೆ.

12) ನಾನು ನೌಕರಿಗೆ ಹೋಗುತ್ತಿದ್ದೇನೆ ಮತ್ತು ಕೇವಲ ನನ್ನ ಅನುಕೂಲಕ್ಕಾಗಿ ನಾನು ಸುಳ್ಳು ಸಾಕ್ಷ್ಯವನ್ನು ಹೇಳುತ್ತಿದ್ದೇನೆ ಎಂದರೆ ಸುಳ್ಳು.

13) ನನ್ನ ಗಂಡನು ಮರಣ ಹೊಂದಿರುವ ಕಾರಣದಿಂದ ಆರ್ಥಿಕವಾಗಿ ನನಗೆ ಯಾವುದೇ ತೊಂದರೆಯು ಉಂಟಾಗಿರುವುದಿಲ್ಲ ಎಂದರೆ ಸುಳ್ಳು.

14) ಅಪಘಾತವು ನನ್ನ ಗಂಡನ ತಪ್ಪಿನಿಂದಲೇ ಉಂಟಾಗಿದೆ ಎಂದರೆ ಸುಳ್ಳು. ನಾನು ಸುಳ್ಳು ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.